ದಿಃ 04-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಆಪಾದಿತನ ಪರ ಶ್ರೀ. ಹೆಚ್.ಎಲ್.ವಿ ವಕೀಲರಿಂದಃ

ಗೌರಿಬಿದನೂರು ಶಾಖೆಯ ವಿಜಯ ಬ್ಯಾಂಕ್ ಗೆ ಸೇರಿದ ಚೆಕ್ ಸಂಖ್ಯೆ 431598 ಅನ್ನು ದಿನಾಂಕ 11-12-2019 ರಂದು ನಗದೀಕರಣಕ್ಕಾಗಿ ದೂರುದಾರನು ತನ್ನ ಖಾತೆಗೆ ಸಲ್ಲಿಸಿಕೊಂಡಿದ್ದನು ಎಂದರೆ ಸರಿ. ಸಾಕ್ಷಿಗೆ ಒಂದು ರಿಟರ್ನ್ ಮೆಮೊ ವನ್ನು ತೋರಿಸಿ ಯಾವುದೇ ಒಂದು ಚೆಕ್ ನಗದೀಕರಣವಾಗದೆ ಇದ್ದಾಗ ಸದರಿ ಮೆಮೊ ರೀತಿಯಲ್ಲಿ ರಿಟರ್ನ್ ಮೆಮೊವನ್ನು ಕೊಡುತ್ತೇವೆ ಎಂದರೆ ಸರಿ ಎಂದು ಸಾಕ್ಷಿ ಗುರುತಿಸಿದ ಮೇರೆಗೆ ಸದರಿ 2 ದಾಖಲೆಗಳನ್ನು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ರೀತಿಯ ಮೆಮೊಗಳಲ್ಲಿ ಚೆಕ್ ನಗದೀಕರಣಕ್ಕಾಗಿ ಸಲ್ಲಿಸಿದ ದಿನಾಂಕವನ್ನು ನಮೂದು ಮಾಡುತ್ತಾರೆ ಎಂದರೆ ಸರಿ. ನಿಪಿ-3 ರಲ್ಲಿ ಸಹಾ ನಗದೀಕರಣಕ್ಕಾಗಿ ಸಲ್ಲಿಸಿದ ದಿನಾಂಕವನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ-3 ರಲ್ಲಿ ಮೊದಲು ತಿಂಗಳು ನಂತರ ದಿನ ನಂತರ ವರ್ಷ ನಮೂದಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು ಯಾವುದೇ Negotiable Instrument ನ ಸಂಖ್ಯೆ ಬದಲಾಗುವುದಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 11-12-2019 ರಂದು ಆಪಾದಿತನಿಗೆ ಸೇರಿದ ಯಾವುದೇ ಚೆಕ್ ಅನ್ನು ನಮ್ಮ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದೂರುದಾರನ ಸಹಾಯ ಮಾಡುವ ಉದ್ದೇಶದಿಂದ ಆತನ ಮಾತು ಕೇಳಿ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಅಂಶಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು